ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 19-03-2021 ಪ್ರಶ್ನೆ ಸಂಖ್ಯೆ : 1492 (1712)

0ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀಮತಿ ಎಸ್.ವೀಣಾಅಚ್ಚಯ್ಯ(ವಿಧಾನಸಭೆಯಿಂದಚುನಾಯಿತರಾದವರು)

ಉತ್ತರ ನೀಡಬೇಕಾ.ದ ದಿನಾಂಕ : 19-03-2021

ಉತ್ತರಿಸುವ ಸಚಿವರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ಕೊಡಗು ಜಿಲ್ಲೆಯ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕುರಿತು

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುರಿದ ಧಾರಾಕಾರ ಮಳೆ ಹಾಗೂ ಭೂಕುಸಿತದಿಂದಾಗಿ ಹಾನಿಗೊಳಗಾಗಿರುವ ಗ್ರಾಮೀಣ ಭಾಗದ ರಸ್ತೆಗಳು ಎಷ್ಟು ; ಮತ್ತು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ರಸ್ತೆಗಳ ದುರಸ್ತಿ ಅಥವಾ ಅಭಿವೃದ್ಧಿಗೆ ಬೇಕಾಗಿದ್ದ ಅಂದಾಜು ಮೊತ್ತ ಎಷ್ಟು ;

(ಇ) ಕಳೆದ 3 ವರ್ಷಗಳಲ್ಲಿ ಸದರಿ ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿಗೆ ಅಂದಾಜು ಮೊತ್ತದಷ್ಟು ಪೂರ್ಣ ಅನುದಾನವನ್ನು ಒದಗಿಸಲಾಗಿದೆಯೇ ; (ವರ್ಷವಾರು ಬಿಡುಗಡೆಯಾಗಿರುವ, ವಿನಿಯೋಗಿಸಿರುವ ಮತ್ತು ಬಾಕಿ ಇರುವ ಅನುದಾನದ ವಿವರಗಳನ್ನು ನೀಡುವುದು)

(ಈ) ಸದರಿ ಹಾನಿಗೊಳಗಾಗಿದ್ದ ಎಲ್ಲಾ ರಸ್ತೆಗಳನ್ನು ದುರಸ್ತಿ ಮತ್ತು ಅಭಿವೃದ್ಧಿ ಪಡಿಸಲಾಗಿದೆಯೇ; ಮತ್ತು ಇದುವರೆವಿಗೂ ದುರಸ್ತಿ ಅಥವಾ ಅಭಿವೃದ್ಧಿ ಪಡಿಸದೇ ಇರುವ ರಸ್ತೆಗಳು ಯಾವುವು; ಅದಕ್ಕೆ ಕಾರಣಗಳೇನು ?